ಪಿ.ಡಬ್ಲೂಃ 1

<u>ದಿನಾಂಕಃ 03.06.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

<u>ಮುಖ್ಯ ವಿಚಾರಣೆ:- ವಾದಿ ಪರವಾಗಿ Sri. MSD, ವಕೀಲರಿಂದ</u>

ನಾನು ನನ್ನ ಮುಖ್ಯ ವಿಚಾರಣೆ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಸದರಿ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದ ಎಲ್ಲ ಸಂಗತಿಗಳು ನನ್ನ ಮಾಹಿತಿ ಮತ್ತು ತಿಳುವಳಿಕೆ ಪ್ರಕಾರ ಸರಿ ಮತ್ತು ಸತ್ಯವಾಗಿರುತ್ತವೆ ನಾನು ಸಾಕ್ಷಿ ಪ್ರಮಾಣಪತ್ರಕ್ಕೆ ಸಹಿ ಮಾಡಿರುತ್ತೇನೆ. ನನ್ನ ದಾವೆಗೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸಲು ವಿನಂತಿ ಪ್ರಾರ್ಥನೆ ಇರುತ್ತದೆ.

1. ದಿಃ 23.10.2018 ರಂದು ನೀಡಿರುವ ದೂರಿನ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

2. ಅಪರಾಧ ಸಂಖ್ಯೆ 157/2018 ರ ಪ್ರ.ವ. ವರದಿಯ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.2 ಎಂದು ಗುರುತಿಸಲಾಯಿತು.

3. ದಿಃ 24.10.2018 ರ ಪಂಚನಾಮೆಯ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

4. ದಿಃ 23.10.2018 ರಂದು ಲಕ್ಷ್ಮೇಶ್ವರ ಪೋಲಿಸ ನವರು ಪ್ರಕಟಿಸಿರುವ ಕಾಣೆಯಾದ ವ್ಯಕ್ತಿಯ ಸಾರ್ವಜನಿಕ ಪ್ರಕಟಣೆಯ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.4 ಎಂದು ಗುರುತಿಸಲಾಯಿತು.

5. ದಿಃ 29.07.2020 ರಂದು ಆರಕ್ಷಕ ಅಧಿಕ್ಷಕ ರವರಿಗೆ ಕಳುಹಿಸಿರುವ ಸಿ ನಾಪತ್ತೆಯ ಅಂತಿಮ ವರದಿಯ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.5 ಎಂದು ಗುರುತಿಸಲಾಯಿತು.

6. ದಿಃ 20.08.2020 ರಂದು ಪೋಲಿಸ ಅಧಿಕ್ಷಕರು ಗದಗ ರವರು ನೀಡಿರುವ ಜ್ಞಾಪನಾ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.6 ಎಂದು ಗುರುತಿಸಲಾಯಿತು.

7. ಸರ್ವೇ ನಂ.388/3 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.7 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಪ್ರಾರ್ಥಿಸಿದಂತೆ ಡಿಕ್ರಿ ಆದೇಶ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಪಾಟೀ ಸವಾಲು ಪ್ರತಿವಾದಿಯರು ಯಾವುದೇ ಪ್ರತಿವಾದ ಪತ್ರ ಸಲ್ಲಿಸದೆ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ

(ನನ್ನ ಉಖ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಲಕ್ಷ್ಮೇಶ್ವರ

O.S.202-25